## 25-09-2024

ವಿದ್ಯಾವರ್ಧಕ ಸಂಘ(ರಿ), ಮೈಸೂರು

# ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ಶೇಷಾದ್ರಿ ಐಯ್ಯರ್ ರಸ್ತೆ, ಮೈಸೂರು

## ಅರ್ಥಶಾಸ್ತ್ರ ವಿಭಾಗ

# ಹಣಕಾಸು ಮತ್ತು ವಿತ್ತೀಯ ನೀತಿ: ಒಂದು ಅವಲೋಕನ



ಸಂಪನ್ಮೂಲ ವ್ಯಕ್ತಿ
ಡಾ.ಆರ್ ನಾಗಭೂಷಣ್
ಸಹ ಪ್ರಾಧ್ಯಾಪಕರು
ಅರ್ಥಶಾಸ್ತ್ರ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಕುವೆಂಪುನಗರ ಮೈಸೂರು



ಡಾ.ಎಸ್.ಮರೀಗೌಡ
ಪ್ರಾಂಶುಪಾಲರು
ವಿ.ವ.ಪ್ರ.ದ. ಕಾಲೇಜು, ಮೈಸೂರು

ಪ್ರೊ.ಸಿದ್ದರಾಜು ಎಸ್
ಮುಖ್ಯಸ್ಥರು, ಅರ್ಥಶಾಸ್ತ್ರ ವಿಭಾಗ
ವಿ.ವ.ಪ್ರ.ದ. ಕಾಲೇಜು, ಮೈಸೂರು

ದಿನಾಂಕ:25-09-2024 || ಸ್ಥಳ :ಚಿಕ್ಕಬೋರಯ್ಯ ಸಭಾಂಗಣ || ಸಮಯ: 11.30 ಗಂಟೆಗೆ

ಎಲ್ಲರಿಗೂ ಆತ್ಮೀಯ ಸ್ವಾಗತ



**"ರಾಜ್ಯಕೋಶ ನೀತಿ ಮತ್ತು ಹಣಕಾಸು ನೀತಿ ಆರ್ಥಿಕತೆಗೆ ಅವಳಿ ಎಂಜಿನ್‌ಗಳಿದ್ದಂತೆ"**

**- ಡಾ.ಆರ್.ನಾಗಭೂಷಣ್**

-

ರಾಜ್ಯಕೋಶ ನೀತಿಯ ವೈಫಲ್ಯತೆಯು ಹಣದುಬ್ಬರ ಮತ್ತು ಆರ್ಥಿಕ ಮುಗ್ಗಟ್ಟಿನಂತಹ ಸನ್ನಿವೇಶಗಳಿಗೆ ಕಾರಣವಾಗುತ್ತವೆ ವಿಪರೀತ ಬೆಲೆ ಏರಿಳಿತಗಳು ದೇಶಕ್ಕೆ ಹಾನಿಕರ ಹಾಗಾಗಿ ಇವುಗಳ ನಿಯಂತ್ರಣಕ್ಕೆ ಹಣಕಾಸಿನ ನೀತಿ ಮತ್ತು ರಾಜ್ಯಕೋಶ ನೀತಿ ಸಾಕಷ್ಟು ಕೊಡುಗೆಯನ್ನು ನೀಡುತ್ತವೆ ಎಂದು ಕುವೆಂಪುನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ.ಆರ್.ನಾಗಭೂಷಣ್ ಅವರು ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ವಿಭಾಗದ ವತಿಯಿಂದ "ಹಣಕಾಸು ಮತ್ತು ವಿತ್ತೀಯ ನೀತಿ : ಒಂದು ಅವಲೋಕನ" ಎಂಬ ವಿಷಯದ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಅವರು ಮಾತನಾಡುತ್ತಿದ್ದರು. ದೇಶದಲ್ಲಿ ಆರ್ಥಿಕ ಚಟುವಟಿಕೆಗಳು ಸುಗಮವಾಗಿ ನಡೆಯಬೇಕಾದರೆ ಆರ್ಥಿಕತೆಗೆ ಸಾಕಷ್ಟು ಪ್ರಮಾಣದ ಹಣದ ಪೂರೈಕೆಯಾಗಬೇಕು. ದೇಶದ ಕೇಂದ್ರ ಬ್ಯಾಂಕಾದ ಆರ್.ಬಿ.ಐ ಹಣಕಾಸಿನ ನೀತಿಯ ಮೂಲಕ ಹಣದ ಪೂರೈಕೆಯನ್ನು ನಿಯಂತ್ರಿಸುತ್ತದೆ. ಇನ್ನೊಂದೆಡೆ ಸರ್ಕಾರ ರಾಜ್ಯಕೋಶ ನೀತಿಯ ಮುಖಾಂತರ ಆರ್ಥಿಕ ಅಸ್ಥಿರ ಸನ್ನಿವೇಶಗಳನ್ನು ಸರಿಪಡಿಸುತ್ತದೆ ಹಾಗಾಗಿ ಇವೆರಡೂ ಪರಸ್ಪರ ಸಮನ್ವಯದಿಂದ ಕಾರ್ಯವನ್ನು ನಿರ್ವಹಿಸಿದಾಗ ಮಾತ್ರ ಆರ್ಥಿಕ ಚಟುವಟಿಕೆಗಳು ಸುಗಮವಾಗಿ ಸಾಗುತ್ತವೆ.

ಸಾಮಾನ್ಯವಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ವಿತ್ತೀಯ ನೀತಿಯನ್ನು ಹೊರಡಿಸುತ್ತವೆ. ರಾಜ್ಯಕೋಶ ನೀತಿ ಮತ್ತು ಹಣಕಾಸು ನೀತಿ ಇವೆರಡೂ ಯಾವುದೇ ಆರ್ಥಿಕತೆಗೆ ಅವಳಿ ಎಂಜಿನ್‌ಗಳಿದ್ದಂತೆ. ಇವುಗಳ ಪರಸ್ಪರ ಸಮನ್ವಯತೆಯಿಂದ ಕಾರ್ಯನಿರ್ವಹಿಸದ ಹೊರತು ಆರ್ಥಿಕ ಅಭಿವೃದ್ಧಿ ಅಸಾಧ್ಯ. ಹಣಕಾಸು ನೀತಿಯ ಸಾಧನಗಳಾದ ಬ್ಯಾಂಕು ದರ, ನಗದು ಮೀಸಲು ಅನುಪಾತ ದರ, ಶಾಸನಾತ್ಮಕ ದ್ರವ್ಯತೆಯ ಅನುಪಾತ ದರ, ರೆಪೋ ದರ, ವಿಪರ್ಯಾಸ ರೆಪೊದರ ಇವುಗಳ ಅರ್ಥ ಹಾಗೂ ಆರ್ಥಿಕ ಸ್ಥಿರತೆಗೆ ಇವು ಹೇಗೆ ಕೆಲಸ ಮಾಡುತ್ತವೆ ಎಂಬುದನ್ನು ತಿಳಿಸಿದರು.

ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಪ್ರಾಸ್ತಾವಿಕ ನುಡಿಗಳನ್ನಾಡಿದ ಕಾರ್ಯಕ್ರಮವನ್ನು ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಆರ್. ಸಿದ್ಧರಾಜು ಸ್ವಾಗತಿಸಿದರು. ಅಧ್ಯಾಪಕರು, ಅಧ್ಯಾಪಕೇತರರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದ ಕಾರ್ಯಕ್ರಮವನ್ನು ಸಹಾಯಕ ಪ್ರಾಧ್ಯಾಪಕರಾದ ಪ್ರೊ.ಪವಿತ್ರ.ಟಿ ವಂದನಾರ್ಪಣೆ ಮಾಡಿದರು.


ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಅರ್ಥಶಾಸ್ತ್ರ ವಿಭಾಗ
ಹಣಕಾಸು ಮತ್ತು ವಿತ್ತೀಯ ನೀತಿ: ಒಂದು ಅವಲೋಕನ



















